ಇಲ್ಲದಂತಿದ್ದ. ಒಮ್ಮೊಮ್ಮೆ ಕಣ್ಣೊಳಗೂ ನೀರೂರಿ ಚರಂಡಿ, ಬೀದಿ, ಆಳುಗಳೇ ಕಾಣದಾಗುತ್ತಿದ್ದರು. ಕನ್ನಗಿಯಾದರೋ ಸದ್ಯಕ್ಕೆ ಮಗನು ಕಣ್ಣ ಮುಂದಿಲ್ಲದಿರುವುದು ಬೇಜಾರಾದರೂ ಈ ವರ್ಷ ಇಲ್ಲವೇ ಮುಂದಿನ ವರ್ಷ ಮಗನು ಮದರಾಸಿನಲ್ಲಿ ಭಾರಿ ಬಿಡಾರ ಹೂಡುತ್ತಾನಲ್ಲ, ಆಮೇಲೆ ನಾನು ಅವನ ಅರಮನೆ ಸೇರಿ ವಾಸವಿರುತ್ತೇನೆ, ಈ ಮುನಿಸಿಲಿಪಾಲಿಟಿಯ ಗಂಡ ಬೇಕಾದರೆ ರಿಟೈರ್ ಆದ ಮೇಲೆ ಬರಲಿ, ಯಾರು ಬೇಡವೆನ್ನುತ್ತಾರೆಂದುಕೊಂಡು ಸಮಾಧಾನವಾದಳು. ತಿರುಮೊಳಿಯ ಗಂಡ ತಂಗಮಣಿಯಾದರೋ ಲಾರಿ ಹತ್ತಿ ದೇಶ ಸಂಚಾರ ಮಾಡುವ ನನಗೆ ಮದರಾಸೇನು ದೂರ? ಒಂದು ದಿನ ಪ್ರಯಾಣ ಅಷ್ಟೇ. ಚೆನ್ನೈ ಸರಕು ಟ್ರಿಪ್ಪು ಹೋದಾಗ ಲಾರಿಯನ್ನೇ ಅಳಿಯನ ಬಂಗಲೆಯ ಕಡೆ ತಿರುಗಿಸಿ ಅಲ್ಲೇ ಒಂದು ದಿನ ತಂಗಿ ಕ್ಷೇಮಸಮಾಚಾರ ವಿಚಾರಿಸಿ ಬರುವೆನೆಂದುಕೊಂಡ.

★★★

ಕೋಯಂಬೀಡು ಸ್ಮಶಾನದ ಸ್ನಾನಘಟ್ಟಗಳ ಬಳಿ ಚಿಗುರಿದ ಚಿನ್ನಪಳನಿಯ ಪ್ರೇಮವು ಅವನ ಮಹೋದ್ದೇಶದಂತೆ ಚೆನ್ನೈಗೆ ಪ್ರಯಾಣಗೈದು ಬಸ್‌ಸ್ಟ್ಯಾಂಡಿನ ಒಂದು ಪಪ್ಪಾರೆಯ ಬಳಿ ವಸತಿಯನ್ನು ಪಡೆಯಿತು. ವಾರವೆಲ್ಲ ಚಿನ್ನಪಳನಿ ಬೆಳಗ್ಗೆ ಹೋಗಿ ಸಂಜೆಗೆ ವಾಪಸಾಗುವಲ್ಲಿ ತರುತ್ತಿದ್ದ ಸುದ್ದಿಗಳು ಮೊದಲ ಒಂದೆರಡು ದಿನ ಕಣ್ಣಾಸೆಲ್ವಿಗೆ, 'ಅಡಿ ಅಮ್ಮಾಡಿ, ಅಪ್ಪಡಿಯಾ' ಎನ್ನುವಂತಿದ್ದವು.

ಬೆಳಗ್ಗೆ ಹೋಗಿ ಸಂಜೆ ಬರುವಲ್ಲಿ, ಇವತ್ತು ಚಂದ್ರಕಾಂತ ಸಾರ್ ಮನೆಯಿಂದ ಹೊರಗೆ ಕಾರಿನಲ್ಲಿ ಹೋಗುವುದನ್ನು ಕಂಡೆ. ಅಲ್ಲಿ ನೂರಾರು ಜನ ಇದ್ದರು, ಮಾತಾಡಿಸಲು ಆಗಲೇ ಇಲ್ಲ, ಗಲಾಟೆಯೋ ಗಲಾಟೆ. ಹುಡುಗರಾದರೂ ಅಲ್ಲೇ ಸೂಪರ್‌ಸ್ಟಾರ್ ಅವರ ಈಚಿನ ಸಿನಿಮಾ ಡೈಲಾಗನ್ನು ಶುರು ಮಾಡಿಕೊಂಡರು. ಇನ್ನು ಕೆಲವರು ಪಾರ್ಕಿನಲ್ಲಿ ಹೀರೋಯಿನ್ ಜೊತೆ ಹಾಡಿದ ಹಾಡನ್ನೇ ಎತ್ತಿಕೊಂಡರು. ನಾನೂ ಅವರದೇ ಸಿನಿಮಾ ಡ್ಯಾನ್ಸ್ ಮಾಡಿ ತೋರಿಸುವಾ ಅಂದರೆ ಹೆಜ್ಜೆ ಹಾಕಿ ಕುಣಿಯಲು ಅಲ್ಲಿ ಜಾಗವೇ ಇರಲಿಲ್ಲ ಅಂದ.

ಅದರ ಮುಂದಿನ ವಾರ ಸೆಲ್ವಿಯ ಮುಂದೆ, 'ಚಂದ್ರ ಸಾರ್ ಸ್ಟುಡಿಯೊ ಒಳಗೆ ಹೋಗುವಾಗ ನಾವು ಅವರೊಂದಿಗೆ ಒಳಗೆ ನುಗ್ಗಲು ಗಲಾಟೆ ಮಾಡಿದೆವು. ಹತ್ತಿಪ್ಪತ್ತು ಸೆಕ್ಯುರಿಟಿ ಜನ ನಮ್ಮನ್ನು ಆಚೆಯೇ ತಳ್ಳಿ ಬಾಗಿಲು ಹಾಕಿದರು' ಎಂದವನೇ ತಾನು ಆ ಮುಂದೆ ಕೈಗೊಂಡ ಉಪಾಯವನ್ನು ಹೇಳಿದ. 'ಸೆಲ್ವಿ, ನಾನು ಬಿಟ್ಟೆನೆ ಅಲ್ಲಿಯೇ ಸ್ಟುಡಿಯೊ ಗೋಡೆ ಸೈಡಿನ ಎತ್ತರದ ಬೇವಿನ ಮರ ಹತ್ತಿ ಕೂತೆ. ಹೀರೊ ಕಾಣಿಸಿದರು. ಅವರ ಸುತ್ತ ಹಗಲು ಸೂರ್ಯನ ಬೆಳಕು ಸಾಲದೆಂಬಂತೆ ಧಗಧಗ ಉರಿಯುವ ಸ್ಪಾಟ್‌ಲೈಟ್. ಅದನ್ನು ಪ್ರತಿಫಲಿಸುವ ಬೆಳ್ಳಿಯ ಹಾಳೆಯ ರಿಫ್ಲೆಕ್ಟರ್‌ಗಳು. ಸ್ಟುಡಿಯೊ ಒಳಗೆ ನೋಡಿದರೆ ಗೋಡೆಗಳೇ ಇಲ್ಲದ ರಟ್ಟಿನ ಬಂಗಲೆ. ಮೋಡವೇ ಇಲ್ಲದೆ ಸುರಿಯುವ ಮಳೆ. ಬೇರು ಇಲ್ಲದ ಕೃತಕ ಗಿಡಮರ. ನಡು ಹಗಲೇ ನಸುಗತ್ತಲ ನಡುವೆ ಕಾಣುವ ಚಂದ್ರ. ಅಲ್ಲೆಲ್ಲ ಚಂದ್ರಕಾಂತ್ ಅವರ ಕುಣಿತ. ಒಮ್ಮೊಮ್ಮೆ ಆ ಕುಣಿತ ಅವರದೂ ಅಲ್ಲ. ಹಾಡುವವರೂ ಅವರಲ್ಲ. ಹೀರೊಯಿನ್ ತಲೆಯ ಉದ್ದನೆಯ ತಲೆಕೂದಲು ಅವಳದಲ್ಲ, ಮುಡಿದ ಹೂ ತೆಳುಪೊರೆಯ ಪ್ಲಾಸ್ಟಿಕ್‌ನವು. ಚಂದ್ರಕಾಂತ್ ಸಾರ್ ಹೇರ್‌ಸ್ಟೈಲೂ ಅವರದಲ್ಲ. ಒಂದೊಂದು ನಿಮಿಷದ ಕುಣಿತಕ್ಕೂ ರೆಸ್ಟು. ತಲೆಯ ವಿಗ್ಗನ್ನೇ ಕಳೆದು ಗಾಳಿ ಬೀಸಿಕೊಳ್ಳುವಲ್ಲಿ ಸಹಾಯಕ ಬೀಸಣಿಗೆ ಹಿಡಿದು ಓಡಿಬರುತ್ತಿದ್ದ. ಮತ್ತೆ ಪ್ರಸಾಧನಕಾರ ಬಂದು ತಲೆಗೆ ಮತ್ತೊಂದು ವಿಗ್ ಇಟ್ಟು, ಹೇರ್‌ಸ್ಟೈಲ್ ಬದಲಾಯಿಸಿದ. ಘಳಿಗೆಯ ಫೈಟಿಂಗಿಗೂ ಸುಸ್ತು. ನನಗೆ ಜಂಘಾಬಲ ಉಡುಗಿ ಪಾತಾಳಕ್ಕೆ ಮುಗ್ಗರಿಸುವಂತಾಗಿ ಹತ್ತಿದ ಮರ ತಬ್ಬಿ ಕೂತೆ. ಅಲ್ಲೇ ಘಳಿಗೆಯ ನಿದ್ದೆಯಿಂದ ಎಚ್ಚರವಾದಂತಾಯಿತು ನೋಡು' ಎಂದ.

ಅದರ ಮುಂದಿನ ತಿಂಗಳು ಪಳನಿ, ಸೆಲ್ವಿಗೆ ಹೇಳಿದ್ದೆಂದರೆ, 'ಸೆಲ್ವಿ ನಿನ್ನೆ ರಾತ್ರಿ ಹನ್ನೊಂದರ ಹೊತ್ತಿನಲ್ಲಿ ಚಂದ್ರಾ ಸಾರ್ ಬಂಗಲೆ ಮುಂದೆ ಹೋಗಿದ್ದೆ. ಅಷ್ಟು ಹೊತ್ತಿನಲ್ಲೂ ಅಲ್ಲಿ ನನ್ನಂಥ ಹುಡುಗರು,